**SL. No. : TTTT**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PF**
**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 96-K** **Code No. : 96-K**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 24. 03. 2018 ] [ Date : 24. 03. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದಲ್ಲಿ ಅತೀ ಹೆಚ್ಚು ಜನಸಾಂದ್ರತೆಯುಳ್ಳ ರಾಜ್ಯ

(A) ಬಿಹಾರ

(B) ಪಶ್ಚಿಮ ಬಂಗಾಳ

(C) ದೆಹಲಿ

(D) ಅರುಣಾಚಲ ಪ್ರದೇಶ

2. ಭಾರತದ ಪ್ರಮುಖ ರಫ್ತು

(A) ರಬ್ಬರ್

(B) ಚಹಾ

(C) ಚಿನ್ನ

(D) ಗ್ರಾನೈಟ್

3. ಒಂದು ದೇಶದ ಒಳಗಡೆ ನಡೆಯುವ ವ್ಯಾಪಾರ

(A) ಆಮದು

(B) ರಫ್ತು

(C) ಪುನರ್ ರಫ್ತು ವ್ಯಾಪಾರ

(D) ಆಂತರಿಕ ವ್ಯಾಪಾರ

4. ನೋಟು ಚಲಾವಣೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಸರಿಸುವ ಪದ್ಧತಿ

(A) ಕನಿಷ್ಠ ಮೀಸಲು ಪದ್ಧತಿ

(B) ಅಧಿಕ ಮೀಸಲು ಪದ್ಧತಿ

(C) ಹೆಚ್ಚುವರಿ ಮೀಸಲು ಪದ್ಧತಿ

(D) ಸರಿಯಾದ ಮೀಸಲು ಪದ್ಧತಿ

5. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಗಿದ್ದು

   (A) 1ನೇ ಏಪ್ರಿಲ್ 1935

   (B) 1ನೇ ಏಪ್ರಿಲ್ 1934

   (C) 1ನೇ ಏಪ್ರಿಲ್ 1949

   (D) 1ನೇ ಏಪ್ರಿಲ್ 1950

6. ಭಾರತದಲ್ಲಿ ಮೊದಲ ರೈಲು ಸಂಚರಿಸಿದ್ದು ಬಾಂಬೆ ಮತ್ತು .................. ನಡುವೆ

   (A) ಸಾಂಗ್ಲಿ

   (B) ಥಾಣೆ

   (C) ಪುಣೆ

   (D) ಪುರಂದರ

7. ನೆಹರೂ ರೋಜ್‌ಗಾರ್ ಯೋಜನೆಯನ್ನು ಜಾರಿಗೆ ತಂದ ಉದ್ದೇಶ,

   (A) ಗ್ರಾಮೀಣ ಬಡಜನರಿಗೆ ಉದ್ಯೋಗ ಒದಗಿಸುವುದು

   (B) ನಗರ ಬಡಜನರಿಗೆ ಗೃಹ ನಿರ್ಮಿಸುವುದು

   (C) ನಗರ ಬಡಜನರಿಗೆ ಉದ್ಯೋಗ ಒದಗಿಸುವುದು

   (D) ಗ್ರಾಮೀಣ ಬಡಜನರಿಗೆ ಗೃಹ ನಿರ್ಮಿಸುವುದು

8. ಸುರೇಶ್ ತೆಂಡೂಲ್ಕರ್ ಅವರು ಬಡತನವನ್ನು ಅಳೆಯಲು ಬಳಸಿದ ಮಾನದಂಡ

   (A) ತಲಾ ಆದಾಯ

   (B) ತಲಾ ಅನುಭೋಗ ವೆಚ್ಚ

   (C) ಪ್ರತಿದಿನ ಸೇವಿಸುವ ಕ್ಯಾಲರಿಗಳು

   (D) ಶಿಕ್ಷಣ, ಆರೋಗ್ಯಕ್ಕೆ ಮೀಸಲಿಟ್ಟ ವೆಚ್ಚ

9. ಬ್ರಿಟಿಷರ ಕಾಲದಲ್ಲಿ ರೈತರೇ ನೇರವಾಗಿ ಸರ್ಕಾರಕ್ಕೆ ಭೂ–ಕಂದಾಯವನ್ನು ಕಟ್ಟುವ ಪದ್ಧತಿ

(A) ಮಹಲ್ವಾರಿ

(B) ಜಹಗೀರ್‌ದಾರಿ

(C) ಜಮೀನ್ದಾರಿ

(D) ರೈತವಾರಿ

10. ಅಲ್ಯೂಮಿನಿಯಂನ ಅದಿರು

(A) ಕಾಗೆ ಬಂಗಾರ (ಮೈಕಾ)

(B) ಬಾಕ್ಸೈಟ್

(C) ಮ್ಯಾಂಗನೀಸ್

(D) ಸೀಸ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಭಾರತದಲ್ಲಿ ಭೂಹಿಡುವಳಿಗಳ ಮೇಲಿನ ಪರಮಾವಧಿ ಮಿತಿ ಶಾಸನವನ್ನು ಯಾವಾಗ ರೂಪಿಸಲಾಯಿತು ?

12. ಭಾರತದಲ್ಲಿ ಅತೀ ಹೆಚ್ಚು ಬಾವಿ ನೀರಾವರಿಯನ್ನು ಹೊಂದಿರುವ ರಾಜ್ಯ ಯಾವುದು ?

13. ಭಾರತದಲ್ಲಿ ಪ್ರಥಮ ಅಣುಶಕ್ತಿ ಕೇಂದ್ರವನ್ನು ಎಲ್ಲಿ ಸ್ಥಾಪಿಸಲಾಯಿತು ?

14. ಭಾರತದಲ್ಲಿ ಅತೀ ಹೆಚ್ಚು ಚಿನ್ನ ಉತ್ಪಾದಿಸುವ ರಾಜ್ಯವನ್ನು ಹೆಸರಿಸಿ.

15. ವಿದೇಶಿ ವಿನಿಮಯ ಎಂದರೇನು ?

16. ಭಾರತದ ಪ್ರಮುಖ ಆಮದನ್ನು ಹೆಸರಿಸಿ.

17. ಬ್ರಿಟಿಷರು ಭಾರತದಲ್ಲಿ ರೈಲು ಸಾರಿಗೆಯನ್ನು ಏಕೆ ಅಭಿವೃದ್ಧಿಪಡಿಸಿದರು ?

18. ಹಸಿರು ಕ್ರಾಂತಿ ಎಂದರೇನು ?

19. ಬ್ರಿಟಿಷ್ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು ?

20. ವ್ಯಾಪಾರ ಎಂದರೇನು ?

21. ಭಾರತ ಸರ್ಕಾರವು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯನ್ನು ( FERA ) ಏಕೆ ಜಾರಿಗೆ ತಂದಿತು ?

22. ಜನಸಾಂದ್ರತೆ ಎಂದರೇನು ?

23. ಭಾರತೀಯ ಸ್ಟೇಟ್ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣಗೊಳಿಸಲಾಯಿತು ?

24. ಅಭಿವೃದ್ಧಿ ಎಂದರೇನು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಸಾಮಾಜಿಕ ಮೂಲಭೂತ ಸೌಕರ್ಯಗಳು ಯಾವುವು ?

26. ರಸ್ತೆ ಸಾರಿಗೆಯ ಪ್ರಾಮುಖ್ಯತೆಯನ್ನು ಬರೆಯಿರಿ.

27. ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?

28. ಜನಸಂಖ್ಯಾ ನೀತಿಯ ಎರಡು ಮೂಲಭೂತ ಅಂಶಗಳು ಯಾವುವು ?

29. ಭಾರತದಲ್ಲಿ ಮರಣದ ಇಳಿಕೆಗೆ ಕಾರಣಗಳು ಯಾವುವು ?

30. ಪರಮಾಣು ಖನಿಜಗಳನ್ನು ಪಟ್ಟಿಮಾಡಿ.

31. ಭಾರತೀಯ ರೈಲು ಸಾರಿಗೆಯಲ್ಲಿ ಬಳಸಲ್ಪಡುವ ಮೂರು ವಿಧದ ಗೇಜ್‌ಗಳನ್ನು ಹೆಸರಿಸಿ.

32. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಕಾರ್ಯಗಳು ಯಾವುವು ?

33. ತಕ್ಕಾವಿ ಸಾಲಗಳ ಪ್ರಾಮುಖ್ಯತೆ ಏನು ?

34. ಹಸಿರು ಕ್ರಾಂತಿಯು ಹೇಗೆ ಆರೋಗ್ಯಕ್ಕೆ ಹಾನಿಕಾರಕ ?

35. ರೈತವಾರಿ ಪದ್ಧತಿಯನ್ನು ವಿವರಿಸಿ.

36. ಕೆಲವು ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ.

37. ಕಲ್ಲಿದ್ದಲಿನ ವಿಧಗಳು ಯಾವುವು ?

38. ಅಭಿವೃದ್ಧಿಶೀಲ ರಾಷ್ಟ್ರವಾಗಿ ಭಾರತದ ಆರ್ಥಿಕತೆಯನ್ನು ವಿವರಿಸಿ.

39. ಮೂಢನಂಬಿಕೆಗಳು ಹಾಗೂ ಕಂದಾಚಾರಗಳು ಆರ್ಥಿಕ ಅಭಿವೃದ್ಧಿಗೆ ಹೇಗೆ ತೊಡಕಾಗಿವೆ ?

40. ಖನಿಜಗಳು ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೇಗೆ ?

41. ಭಾರತದಲ್ಲಿ ಪೆಟ್ರೋಲಿಯಂನ್ನು ಎಲ್ಲಿ ಸಂಶೋಧಿಸಲಾಗಿದೆ ?

42. ಭಾರತದಲ್ಲಿ 1921 ರಿಂದ 1951 ರವರೆಗೆ ಜನಸಂಖ್ಯಾ ಬೆಳವಣಿಗೆಯ ವೇಗವು ಹೆಚ್ಚಾಗಿತ್ತು. ಏಕೆ ?

43. ಭಾರತದಲ್ಲಿ ಭೂ ಸುಧಾರಣೆಗಳ ವಿಫಲತೆಗೆ ಕಾರಣಗಳೇನು ?

44. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕೃಷಿ ಹಣಕಾಸಿಗೆ ಹೇಗೆ ಸಹಕಾರಿಯಾಗಿವೆ ?

45. ಜೀತ ಕಾರ್ಮಿಕರನ್ನು ಭಾರತದಲ್ಲಿ ಹೇಗೆ ಕರೆಯಲ್ಪಟ್ಟಿದ್ದಾರೆ ?

46. ಭಾರತದಲ್ಲಿ ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಹೇಗಿದೆ ?

47. ನಿರಪೇಕ್ಷ ಮತ್ತು ಸಾಪೇಕ್ಷ ಬಡತನದ ನಡುವಿನ ವ್ಯತ್ಯಾಸಗಳೇನು ?

48. ಭಾರತದಲ್ಲಿ ಹಡಗು ನಿರ್ಮಾಣ ಘಟಕಗಳನ್ನು ಎಲ್ಲಿ ಸಾಪಿಸಲಾಗಿದೆ ?

49. ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳನ್ನು ಹೆಸರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಭಾರತದಲ್ಲಿ ಕೈಗೊಳ್ಳಲಾದ ಯಾವುದಾದರೂ ಆರು ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಹೆಸರಿಸಿ.

***ಅಥವಾ***

ರಸ್ತೆಗಳ ವಿಧಗಳನ್ನು ಬರೆಯಿರಿ.

51. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಕಾರ್ಯಗಳು ಯಾವುವು ?

***ಅಥವಾ***

ವಿದೇಶಿ ವ್ಯಾಪಾರದ ಮಹತ್ವವೇನು ?

52. ಕೈಗಾರಿಕಾ ಕಾರ್ಮಿಕರ ಸಮಸ್ಯೆಗಳನ್ನು ಪಟ್ಟಿಮಾಡಿ.

***ಅಥವಾ***

ಕಾರ್ಮಿಕರ ಸಂಘಗಳ ಉದ್ದೇಶಗಳನ್ನು ಪಟ್ಟಿಮಾಡಿ.

53. ಲೇವಾದೇವಿಗಾರರು ಕೃಷಿ ಹಣಕಾಸಿನಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಹೇಗೆ ?

***ಅಥವಾ***

ಕೈಗಾರಿಗಾಭಿವೃದ್ಧಿಯು ದೇಶದ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿದೆ. ಹೇಗೆ ?

54. ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಅಂಶಗಳು ಯಾವುವು ?

***ಅಥವಾ***

ತುಂತುರು ನೀರಾವರಿಯ ಪ್ರಯೋಜನಗಳಾವುವು ?

55. ಅಭಿವೃದ್ಧಿ ಹೊಂದಿದ ದೇಶದ ಲಕ್ಷಣಗಳು ಯಾವುವು ?

***ಅಥವಾ***

ಮಣ್ಣಿನ ಸಂರಕ್ಷಣಾ ಕ್ರಮಗಳನ್ನು ಪಟ್ಟಿಮಾಡಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ಅಥವಾ *ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

56. ಶ್ರಮದ ಪ್ರಮುಖ ಲಕ್ಷಣಗಳು ಯಾವುವು ?

57. ಭಾರತದಲ್ಲಿ ಕೃಷಿ ಹಣಕಾಸಿನ ಪ್ರಾಮುಖ್ಯತೆಯನ್ನು ವಿವರಿಸಿ.